ಇವರನ್ನು ಕಡ್ಡಾಯ ನಿವೃತ್ತಿಗೊಳಿಸಿದ್ದು ಪುನರ್‌ನೇಮಕ ಮಾಡುವ ಬಗ್ಗೆ ಮತ್ತು ಎರಡನೆಯ ಅರ್ಜಿಯಾದ ಕೊಳ್ಳೇಗಾಲ ತಾಲ್ಲೂಕಿನ ಮಧುವನ ಹಳ್ಳಿಯ ಶ್ರೀಎಸ್. ಬಾಬುರವರಿಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ನೀಡುವ ಬಗ್ಗೆ ಇರುವ ಅರ್ಜಿಗಳನ್ನು ಸದನದ ಮುಂದೆ ತಮ್ಮ ಅನುಮತಿ ಪಡೆದು ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು: ಶ್ರೀ ಸಿ.ಎಂ. ಲಿಂಗಪ್ಪನವರ ಹೆಸರಿನಲ್ಲಿರುವ ಅರ್ಜಿಯಾದ ಚಿತ್ರದುರ್ಗದ ಅಕ್ಕಮಹಾದೇವಿ ಸಮಾಜ ರಸ್ತೆಯಲ್ಲಿರುವ ಕೋಮಲ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಡಾ|| ಕೋಮಲ ಪಿ.ಹೆಚ್. ಇವರು ಈ ಹಿಂದೆ ಸರ್ಕಾರದ ವಸತಿ ಗೃಹದಲ್ಲಿ ವಾಸಮಾಡುತ್ತಿದ್ದ ಸಂದರ್ಭದಲ್ಲಿ ವಿಧಿಸಲಾದ ದಂಡರೂಪದ ಬಾಡಿಗೆಯನ್ನು ಬಿಡುವ ಕುರಿತು ಇರುವ ಅರ್ಜಿಯನ್ನು ಸದನಕ್ಕೆ ನಾನೇ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು:- ಅರ್ಜಿಗಳನ್ನು ಒಪ್ಪಿಸಲಾಯಿತು.

6. ವರದಿಗಳನ್ನೊಪ್ಪಿಸುವುದು.

ಉಪಾಧ್ಯಕ್ಷರು: ಶ್ರೀಎಂ.ಚಂದ್ರಪ್ಪನವರ ಪರವಾಗಿ ನಾನೇ ಅಧೀನ ಶಾಸನ ರಚನಾ ಸಮಿತಿಯ 24ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ ವಿಧಾನಸಭಾ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಶ್ರೀ ಹೆಚ್.ಕೆ.ಕುಮಾರಸ್ವಾಮಿ ಪರವಾಗಿ ಸಭೆಯ ಮುಂದಿಡಲಾದ ರಾಗದ ಪತ್ರಗಳ ಸಮಿತಿಯ 1998-99ನೇ ಸಾಲಿನ 17ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು: ವರದಿಗಳನ್ನೊಪ್ಪಿಸಲಾಯಿತು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

ಅ) ಬೆಳಗಾವಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ .

ಶ್ರೀ ಚಂದ್ರಶೇಖರ ನಾಯಕ್(ಗೋಕಾಕ್ ವಿಧಾನಸಭೆ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕುಡಿಯುವುದಕ್ಕೆ ನೀರಿಲ್ಲವಾಗಿದೆ. ಹಲವಾರು ಗ್ರಾಮಗಳಲ್ಲಿ ತೆಗೆದ ಬೋರವೆಲ್‌ಗಳಿಗೆ ಹೋದ ವರ್ಷ ಕೂಡ ಹಣ ಕೊಟ್ಟಿಲ್ಲ ಮತ್ತು ಈ ವರ್ಷವು ಕೂಡ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಜಿಲ್ಲಾಮಂತ್ರಿಗಳು 27ನೇ ತಾರೀಖು ಕುಡಿಯುವ ನೀರಿನ ಸಲುವಾಗಿ ಮಿಟಿಂಗ್ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೇಳಿದರೆ ಕೊಡುವುದಕ್ಕೆ ದುಡ್ಡಿಲ್ಲ. ಈಗ ಗೋಕಾಕ್ ತಾಲ್ಲೂಕಿನ ಮಲ್ಲಾಪುರ,ಚಿಲ್ಕಿಬಾವಿ, ಮಕ್ಕಳಗೇರಿ, ಕಡಬಗಟ್ಟಿ, ಈ ಎಲ್ಲಾ ಗ್ರಾಮಕ್ಕೂ ನೀರೂ ಇಲ್ಲ, ಬೋರ್‌ಗಾಡಿಯೂ ಕೂಡ ಬಂದಿಲ್ಲ. ಹೀಗಾದರೆ ಕುಡಿಯುವ ನೀರಿನ ಪರಿಸ್ಥಿತಿ ಹೇಗೆ ಎಂಬುದನ್ನೂ ವಿಚಾರ ಮಾಡಬೇಕು. ನೀರು ಬೇಕೆಂದು ಅಲ್ಲಿ ದುಡ್ಡಿಲ್ಲ, ದುಡ್ಡಿಲ್ಲದಿದ್ದರೆ ಅಲ್ಲಿಗೆ ನೀರಿಲ್ಲ. ಹೀಗಿರುವಾಗ ಕುಡಿಯುವ ನೀರಿಗೆ ಯಾವ ರೀತಿಯಾಗಿ ವ್ಯವಸ್ಥೆಯನ್ನು ಮಾಡುತ್ತೀರಿ ?